Reg.No. M. 1550.
KODAGU MERCARA, (Coorg).

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೪ | ತಾರೀಕು ೨೮—೭—೧೯೪೪ನೇ ಶುಕ್ರವಾರ. | ಸಂಚಿಕೆ ೮

ಹಿಟ್ಲರನ ಕೊಲೆಯ ಯತ್ನ.

ಯುದ್ಧವು ದಿನೇ ದಿನೇ ಜರ್ಮನಿಯ ಹತ್ತಿರ ಬರತೊಡಗಿದೆ. ಜರ್ಮನರ ಮನಸ್ಸಿನಲ್ಲಿ ಒಂದು ರೀತಿಯ ಕಳವಳವು ಮೂಡಿರಬೇಕು. ಇದಕ್ಕೆ ದ್ಯೋತಕವಾಗಿ ತಾ. 20 ರಲ್ಲಿ ಜರ್ಮನಿಯ ಕೆಲವು ಪಿತೂರಿಕಾರರು ಒಳಸಂಚುಮಾಡಿ ಹಿಟ್ಲರನ ಕೊಲೆಮಾಡುವ ನುತ್ತು ಬರ್ಲಿನಿನ ಸರಕಾರಿ ಭವನವನ್ನು ಹಿಡಿಯುವ ಪ್ರಯತ್ನಮಾಡಿದರು. ಬರ್ಲಿನಿನ ರಕ್ಷಣಾ ಸೈನ್ಯದ ಮುಖ್ಯಾಧಿಕಾರಿಯೂದ ಮೇಜರ್ ಜನರಲ್ ರೆಮರವರಿಗೆ ಒಂದು ಆಜ್ಞೆ ಬಂತು. ಆ ದಳ್ಳಿಲ್ಲಿ ಅತನು ಸೈನ್ಯದೊಡಗೂಡಿ ಸರ್ಕಾರಿ ಮುಖ್ಯ ಖಚೇರಿಯನ್ನು ವಶಪಡಿಸಿಕೊಳ್ಳಬೇಕೆಂದಿತ್ತು. ರೆಮರಿಗೆ ಇದು ಆರ್ಥವಾಗಲಿಲ್ಲ. ನಗರದ ರಕ್ಷಣೆಗಿರುವವರು ನಗರವನ್ನಾಕ್ರಮಿಸುವ ಅವಶ್ಯಕತೆಯೇನೆಂದು ಸಂಶಯ ಬಂದು ಇದರ ನಿಜಾಂಶ ತಿಳಿಯಲು ಜರ್ಮನ್ ಪ್ರಚಾರ ಮಂತ್ರಿ ಗೇಬಲ್ಸರಿಗೆ ಟೆಲಿಫೋನ್ ಮಾಡಿದರು. ಈ ವಿಚಾರ ತಿಳಿದು ಹಿಟ್ಲರನೇ ನೇರವಾದ ಆಜ್ಞೆಯನ್ನು ಕಳುಹಿಸಿ ಪಿತೂರಿಕಾರರ ಒಳಸಂಚನ್ನು ಅಡಗಿಸಿದನು. ಪಿತೂರಿಕಾರಮಧ್ಯದಲ್ಲಿಹಲವುನಿವೃತ್ತಮುಖ್ಯ ಜರ್ಮನ್ ನಾಯಕರಿರುವರಂತೆ. ಪಿತೂರಿಕಾರರು ಕೆಳದರ್ಜೆ ಅಧಿಕಾರಿಗಳ ಮೂಲಕ ಹೊಂದಿದ ಟೆಲಿಫೋನ್ ಸೌಲಭ್ಯಗಳ ಮೂಲಕ ದೇಶದೊಳಗಿನ ಮತ್ತು ರಣಕ್ಷೇತ್ರದಲ್ಲಿನ ಸೈನ್ಯಗಳಿಗೆ ಆಜ್ಞೆಗಳನ್ನಿತ್ತರು ಎಂದು ತಿಳಿದುಬಂದಿದೆ. ಆದರೆ ಈ ಆಜ್ಞೆಗಳು ಪಿತೂರಿಗಾರರಿಂದ ಬಂದುದೆಂದು ಕೂಡಲೇ ಗೊತ್ತಾದ ಕಾರಣ ಪಿತೂರಿಗಾರರ ಸಂಚು ನಡೆಯಲಿಲ್ಲ.

ಇದರೊಂದಿಗೆ ಸರ್ವಾಧಿಕಾರಿ ಹಿಟ್ಲರನ ಪ್ರಾಣಾಪಹಾರಮಾಡುವ ಒಳಸಂಚನ್ನು ನಡೆಸಲಾಗಿತ್ತು. ಕೌಂಟ್ ಕ್ಲಾಸ್ ವಾನ್ ಸ್ಟಾಫೆನ್‌ಬರ್ಗ್ ಎಂಬ 37 ವರ್ಷದ ಒಬ್ಬ ಸೈನ್ಯಾಧಿಕಾರಿಯು ಇದನ್ನು ಇದನ್ನು ಆಯ್ಕೆಮಾಡಿಸಿದನು. ನಿಶ್ಚಿತ ಸಮಯಕ್ಕೆ ಸಿಡಿಯುವ ಬಾಂಬೊಂದನ್ನು ಈತನು ಹಿಟ್ಲರನು ಮುಸಲೋನಿಯ ಭೇಟಿ ನೂಡುವ ಸ್ಥಳದಲ್ಲಿ ಇರಿಸಿದ್ದನು. ಆದರೆ ಹಿಟ್ಲರನು ಸಭೆಗೆ ಎರಡು ನಿಮಿಷ ತಡವಾಗಿ ಬಂದನು. ಆದ್ದರಿಂದ ಸಭಾಭವನದ ಬಾಗಿಲಿಗೆ ಬರುವಾಗಲೇ ಬಾಂಬುಸಿಡಿದು ಅನೇಕರಿಗೆ ಜಖಂಗಳಾದವು. ಹಿಟ್ಲರನು ದೈವೇಚ್ಛೆಯಿಂದ ಬದುಕಿದನು. ಹಿಟ್ಲರನು ಗಾಬರಿಗೊಳ್ಳದೆ ಮುಸಲೋನಿಯ ಭೇಟಿಯನ್ನು ತೆಗೆದುಕೊಂಡನು. ಬಾಂಬಿನ ಸಿಡಿತದಿಂದ ಅತನ ಮೈಯ್ಯಲ್ಲಿ ಕೆಲವು ಚಿಕ್ಕ ಗಾಯಗಳಾಗಿವೆ. ಈ ಸಂಚುನಡೆಸಿದ ಸ್ಟಾಫೆನ್‌ಬರ್ಗನನ್ನು ಲಕ್ಷಣಗುಂಡಿಕ್ಕಿ ಕೊಂದುದಲ್ಲದೆ ಅತನ ಅನುಯಾಯಿಗಳು ಕೆಲವರನ್ನೂ ಕೊಲ್ಲಲಾಗಿದೆ. ಹಲವರ ದಸ್ತಗಿರಿಯಾಗಿದೆ. ಬರ್ಲಿನ್ ನಗರವು ನಾಲ್ಕು ದಳಗಳ ಹಿಡಿತದಲ್ಲಿದೆ. ಹಿಟ್ಲರನಿಗೆ ವಿಧೇಯತೆಯಪ್ಪಿ ತೋರುವ ಹೊಸ ಸ್ರವೂಣ ವಚನವನ್ನು ಎಲ್ಲ ಮಿಲಿಟರಿ ಅಧಿಕಾರಿಗಳೂ ಸ್ವೀಕರಿಸಬೇಕೆಂದು ಆಜ್ಞೆಕೊಡಲಾಗಿದೆ.

ಈ ಮಧ್ಯೆ ಹಿಟ್ಲರನ ದಸ್ತಗಿರಿಯಾಗಿದೆಯೆಂದು ಅಂಕಾರದಿಂದ ಸುದ್ದಿಬಂದಿತ್ತು. ಈ ಸುದ್ದಿಯು ಮಿಂಚಿನವೇಗದಿಂದ ಜಗತ್ತಿನ ಮೂಲೆ ಮೂಲೆಯಲ್ಲಿ ಪ್ರತಿಧ್ವನಿಸಿತು. ಅನೇಕರಿಗೆ ಸಂತೋಷವೂ, ಅನೇಕರಿಗೆ ದುಃಖವೂ ಈ ವಾರ್ತೆಯಿಂದ ಆಯಿತು. ಆದರೆ ಅದು ನಿರಾಧಾರವಾದುದೆಂದು ಈಗ ತಿಳಿದುಬಂದಿದೆ. ವಾರ್ತೆಗಳ ಅಪಪ್ರಚಾರ ಯಾವ ರೀತಿ ನಡೆಯುತ್ತದೆಯೆಂಬುದಕ್ಕೆ ಇದೊಂದು ನಿದರ್ಶನ. ಮೇಲಿನ ಒಳಸಂಚಿನ ಘಟನೆಯೂದೊಡನೆಯೇ ಇಡೀ ಜರ್ಮನ್ ಜನತಾಂಗವನ್ನುದ್ದೇಶಿಸಿ ಹಿಟ್ಲರನು ಈ ರೀತಿಯ ಭಾಷಣವೊಂದನ್ನು ಮಾಡಿದನು. 'ಕೆಲವೊಂದು ದೇಶದ್ರೋಹಿಗಳಾದ ಪಿತೂರಿಗಾರರು ಈ ಕೃತ್ಯವನ್ನು ಮಾಡಿದ್ದಾರೆ. ಈ ಯುದ್ಧದಿಂದ ಹೇಡಿಗಳಾಗಿ ಧೃತಿಗೆಟ್ಟು ಈ ರೀತಿಯ ಪಾಶವೀನೀತಿಗೆ ಕೈಹಾಕಿದ್ದಾರೆ. ಆದರೆ ಭಗವಂತನು ದೊಡ್ಡವನು. ನನ್ನನ್ನು ರಕ್ಷಿಸಿದನು. ಈ ಮೊದಲೂ ಒಮ್ಮೆ ಇದೇ ರೀತಿಯ ಗಂಡಾಂತರದಿಂದ ನನ್ನನ್ನು ರಕ್ಷಿಸಿದನು. ನಾನು ಜೀವಂತವಿರುವುದು ದೇವರಿಗೆ ಅಗತ್ಯವಾಗಿ ಕಂಡಿದೆ. ಇನ್ನೈಯಿಂದ ಇನ್ನೂ ಅನೇಕ ಕಾರ್ಯಗಳನ್ನು ಆತನು ಮಾಡಿಸಲಿರಬೇಕು. ಅದ್ದರಿಂದಲೇ ಜರ್ಮನಿಗಾಗಿ ನನ್ನನ್ನು ರಕ್ಷಿಸಿದ್ದಾನೆ. ಈ ಪಿತೂರಿಗಾರರ ಬೇರನ್ನೇ ನಿರ್ಮೂಲಮಾಡಲಾಗಿದೆ. ಜರ್ಮನ್ ಜನತೆಯಲ್ಲಿ ಹಿಟ್ಲನ ಐಕ್ಯತೆಯೂಗಿದೆ. ಎಲ್ಲರೂ ಎಂದಿಗಿಂತಲೂ ಮಿಗಿಲಾಗಿ ರಾಷ್ಟ್ರದ ಹಿತಕ್ಕಾಗಿ ತ್ಯಾಗಮಾಡಿದ್ದಿರೆಂದು ನಂಬಲಾಗಿದೆ.' ಇದಾದ ನಂತರ ಹಿಟ್ಲರನು ತನ್ನ ಮುಖ್ಯ ಸೇನಾನಿಗಳನ್ನು ಕರೆಸಿ ಪರ್ಯಾಲೋಚಿಸಿದನು. ಮುಸಲೋನಿಯು ಪುನಹ ಹಿಟ್ಲರನ ಭೇಟಿ ತೆಗೆದುಕೊಂಡಿರುವನು.

ಹಿಟ್ಲರ್ ಮತ್ತವನ ಮುಖ್ಯ ಸ್ನೇಹಿತರು ಈ ಗಂಡಾಂತರದಿಂದ ತಪ್ಪಿಸಿಕೊಂಡು ಓಡಿಹೋಗಲು ನಾಲ್ಕು ವಿಮಾನಗಳನ್ನು ಸಿದ್ಧಪಡಿಸಿಡಲಾಗಿತ್ತೆಂದೂ 6000 ಮೈಲುಗಳ ದೂರ ಹಾರಲು ಅಗತ್ಯವಿರುವಷ್ಟು ಪೆಟ್ರೋಲನ್ನು ಆ ವಿಮಾನಗಳಿಗೆ ತುಂಬಲಾಗಿತ್ತೆಂದೂ ವಾರ್ತೆಗಳಿವೆ. ಹಿಟ್ಲರನು ಹೊಸ ಅಧಿಕಾರಿಗಳನ್ನು ಸೇರಿಸಿ ಹೊಸ ಜರ್ಮನ್ ಸರಕಾರ ರಚಿಸಿರುವನು. ಮುಖ್ಯರಾದ ಅನೇಕ ಮುಂದಾಳುಗಳನ್ನು ದಸ್ತಗಿರಿ ಮಾಡಿದ್ದರಿಂದ ಈ ಬದಲಾವಣೆಯೂದುದಾಗಿದೆ. ಪೂರ್ವ ಪ್ರಶ್ಯಾದಲ್ಲಿರುವ ಜರ್ಮನ್ ಸೇನೆಗಳು ಹಿಟ್ಲರನಿಗೆ ವಿರುದ್ಧ ದಂಗೆಯೆದ್ದಿವೆಯೆಂದು ವಾರ್ತೆಗಳಿವೆ. ಇದು ನಿಜವೇ ಎಂದು ಇನ್ನೂ ದೃಢವಾಗಿ ತಿಳಿದುಬಂದಿಲ್ಲ.

ಜರ್ಮನಿಯ ಶಕ್ತಿ.

ಜರ್ಮನಿಯ ಶಕ್ತಿ ಉಡುಗುತ್ತಾ ಬರುತ್ತಿದೆಯೆಂದು ಕೆಲವರು ಹೇಳುತ್ತಿದ್ದಾರೆ. ಅವರ ಶಕ್ತಿ ಎಷ್ಟಿದೆಯೆಂಬ ಬಗ್ಗೆ ಲಂಡನಿನ 'ಜೈಲಿ ಟೆಲಿಗ್ರಾಫ್' ಪತ್ರಿಕೆಯಲ್ಲಿ ಲೆ. ಜನರಲ್ ಎಚ್. ಜಿ. ಮಾರ್ಟಿನ್‌ರವರು ಹೀಗೆ ಬರೆದಿರುವರು.

'ಫ್ರಾನ್ಸ್ ಮತ್ತು ಕೆಳ ಪ್ರದೇಶದಲ್ಲಿ ಜರ್ಮನರು 60 ರಿಂದ 65 ದಳಗಳನ್ನಿರಿಸಿರುವರು. ಡೆನ್ಮಾರ್ಕ್, ನಾರ್ವೆಗಳಲ್ಲಿ 15 ರಿಂದ 20 ದಳಗಳಿವೆ. ಇಟಲಿಯಲ್ಲಿ 27 ಯೂ 28 ದಳಗಳಿವೆ. ಬಾಲ್ಕನ್ ಮತ್ತು ಹಂಗೇರಿಯಲ್ಲಿ 22 ಯೂ 23 ದಳಗಳಿವೆ. ಇವಲ್ಲದೆ ಬಲ್ಗೇರಿಯಾದ ದಳಗಳು ಪ್ರತ್ಯೇಕವಾಗಿ 21 ಇವೆ. ರಷ್ಯಾ ರಣರಂಗದಲ್ಲಿ 173 ರಿಂದ 178 ದಳಗಳಿವೆ. ಇವಲ್ಲದೆ 15 ಹಂಗೇರಿಯನ್ ದಳಗಳೂ, 30 ರೊಮೇನಿಯನ್ ದಳಗಳೂ ಇವೆ. ಫಿನ್ಲೆಂಡಿನಲ್ಲಿ ಜರ್ಮನರು 7 ದಳಗಳನ್ನಿರಿಸಿರುವರು. ಫಿನ್ಲೆಂಡಿನ 15 ದಳಗಳು ಪ್ರತ್ಯೇಕ ಇವೆ. ಇವೆಲ್ಲವನ್ನೂ ಸೇರಿಸಿದರೆ ಎಲ್ಲ ರಣರಂಗಗಳಲ್ಲಿ ಜರ್ಮನರ 320 ದಳಗಳೂ, ಜರ್ಮನ್ ಮಿತ್ರರ 80 ದಳಗಳೂ ಇವೆಯೆನ್ನಬಹುದು. ಜರ್ಮನಿಯ ಸ್ನೇಹಿತರಾದ ಜಪಾನ್, ಸ್ಪೆಯಿನ್‌ಗಳ ಲೆಕ್ಕ ಇದಕ್ಕೆ ಸೇರಿಲ್ಲ. ಜರ್ಮನಿನೊಳಗೆ ದೇಶರಕ್ಷಣೆಗೆ ಮತ್ತು ರಿಜರ್ವ್ ದಳಗಳು ಕೆಲವು ಇದ್ದೇ ಇರಬೇಕು. ಇವು ಎಷ್ಟೆಂದು ಅಂದಾಜು ಮಾಡುವದು ಕಷ್ಟವಾಗಿದೆ.

—೦೨—

ಪ್ರಾರ್ಥನಾಸಮಯದಲ್ಲಿ ಗಲಭೆ

ಮಹಾತ್ಮಗಾಂಧಿಯವರು ಪಂಚಗನಿಯಲ್ಲಿರುವರಷ್ಟೆ. ತಾ. 21 ರಲ್ಲಿ ಸಾಯಂಕಾಲ ಪ್ರಾರ್ಥನೆ ನಡೆಯುತ್ತಿತ್ತು. ಅನೇಕ ಜನರು ಕಿಕ್ಕಿರಿದು ನೆರೆದಿದ್ದರು. ಪ್ರಾರ್ಥನೆ ಮುಗಿದ ಮೇಲೆ ಪೂನಾದಿಂದ ಬಂದ ಒಬ್ಬ ಹಿಂದೂ ಯುವಕನು ಗಾಂಧೀಜಿಯವರನ್ನು ಸಂಭೋಧಿಸಿ ಹೀಗೆ ಕೇಳಿದನು. 'ನೀವು ರಾಜಗೋಪಾಲಾಚಾರಿಯವರ ಹಿಂದೂ ಮುಸ್ಲಿಂ ಐಕ್ಯತೆಯ ಸೂಚನೆಗಳಿಗೆ ಸಮ್ಮತಿಯನ್ನು ಕೊಟ್ಟಿರುವಿರಾ?' ಗಾಂಧೀಜಿಯವರು 'ಹೌದೆಂದು ಒಪ್ಪಿಕೊಂಡರು. 'ಹಾಗಾದರೆ ನಾನು ಅದನ್ನು ತೀವ್ರವಾಗಿ ವಿರೋಧಿಸುತ್ತೇನೆ' ಎಂದು ಯುವಕನೆಂದ. 'ವಿರೋಧಿಸುವದರಲ್ಲಿ ಅಭ್ಯಂತರವಿಲ್ಲ. ಆದರೆ ವಿರೋಧಿಸುವ ಸ್ಥಳ ಪ್ರಾರ್ಥನಾಮಂದಿರವಲ್ಲ' ಎಂದು ಗಾಂಧಿಯವರಂದರು. ಅಷ್ಟರಲ್ಲಿ ಆ ಯುವಕನ ಸಂಗಡ ಇದ್ದ ಇನ್ನೂ ಹತ್ತಾರು ಯುವಕರು ಘೋಷಣೆಗಳನ್ನು ಮಾಡುತ್ತಾ ಕೈಯಲ್ಲಿ ಲಾಠಿ ಹಿಡಿದು ಮುಂದೆ ಸಾಗಿದರು. ಅಷ್ಟರಲ್ಲಿ ಅಲ್ಲಿದ್ದ ಡಾ. ಡಿನ್ಶಾ ಮೆಹತಾರವರು ಅವರನ್ನು ಹೊರಗೆದಬ್ಬಿದರು. ನಂತರ ಎಲ್ಲರೂ ಶಾಂತರಾಗಿ ಹಿಂತೆರಳಿದರು. ಗಾಂಧಿಯವರ ಸುತ್ತು ಆಯುಧಪಾಣಿಗಳಾದ ಖಾಸಗಿ ವಶ್ರ್ಯಧರಿಸಿದ ನಾಲ್ಕು ಸಿ. ಐ. ಡಿ. ಪೋಲೀಸರು ಇದ್ದರಂತೆ. ಮಹಾತ್ಮರಿಗೆ ಇದು ತಿಳಿದೇ ಇರಲಿಲ್ಲ. ನಂತರ ತಿಳಿದುಬಂತು. ಮಹಾತ್ಮರು ಗಲಭೆ ನಿಲ್ಲುವ ವರೆಗೆ ನಿಶ್ಚಲರಾಗಿ ಕುಳಿತಲ್ಲೇ ಇದ್ದರು. ನಂತರ ಎದ್ದು ನಿವಾಸಕ್ಕೆ ಹೋದರು.

—೦೮—

ಕೊಡಗು

ತಾ. ೧೪-೭-೧೯೪೪ನೇ ಶುಕ್ರವಾರ

ಜಾನುವಾರುಗಳ ಅಭಿವೃದ್ಧಿ ಯೋಜನೆ.

ರಾಂದೂದೇಶದಲ್ಲಿಯ ಜಾನುವಾರುಗಳ ಮತ್ತು, ವ್ಯವಸಾಯದ ಇಂದಿನ ಅಧೋಗತಿಯನ್ನು ಉತ್ತಮ ಪಡಿಸಲು ಒಂದು ಸಾವಿರ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ವಿಶೇಷ ಸಮಿತಿಯು ತಯಾರಿಸಿ ಹಿಂದೂದೇಶದ ವ್ಯವಸಾಯ ಪರಿಶೋಧನಾ ಸಮಿತಿಯು ಪರ್ಯಾಲೋಚನೆಗೆ ಇಟ್ಟಿದೆ. ಈ ಯೋಜನೆಯು ಜಾನುವಾರುಗಳ ಉತ್ಪತ್ತಿಯನ್ನು ಬರುವ ಹತ್ತು ವರ್ಷಗಳಲ್ಲಿ ಶೇಕಡ 50ರಂತೆಯೂ, ಮುಂದಿನ 15 ವರ್ಷಗಳಲ್ಲಿ ಶೇಕಡ 100ರಂತೆಯೂ ಹೆಚ್ಚಿಸುವ ಧ್ಯೇಯವನ್ನೊಳಗೊಂಡಿದೆ. ವ್ಯವಸಾಯ ಪರಿಶೋಧನಾಸಮಿತಿಯಅಧ್ಯಕ್ಷರಾದ ಮಿ. ಖಾರೆಗಾಟ್‌ರವರು ಈಯೋಜನೆಯು ಯುದ್ಧಾನಂತರ ಜೈಕೊಳ್ಳುವ ಪುನರ್ರಚನಾ ಯೋಜನೆಯಲ್ಲವೆಂದೂ ಈಗಲೇ ಕೈಕೊಳ್ಳಬೇಕಾದ ಅತ್ಯಗತ್ಯದ ಕರ್ತವ್ಯವೆಂದೂ ಸೂಚಿಸಿರುವರು. ಜನರಿಗೆ ಯೋಗ್ಯ ರೀತಿಯ ಆಹಾರ ದೊರೆಯುವ ಮತ್ತು ಜನತೆಯ ಜೀವನ ಮಟ್ಟವನ್ನು ಉತ್ತಮಪಡಿಸುವ ಕಾರ್ಯವೇ ಇದರ ಉದ್ದೇಶವೆಂದೂ ಹೇಳಿರುವರು. ಮಾನವನ ಜೀವನದಲ್ಲಿ ಹಾಲಿನ ಸ್ಥಾನವೆಂಥಾದ್ದೆಂಬುವುದು ಎಲ್ಲರಿಗೂ ತಿಳಿದುದೇ. ಆದರೆ ಇಂದು ಎಷ್ಟರ ಮಟ್ಟಿಗೆ ಈ ಹಾಲು ಜನರಿಗೆ ದೊರೆಯುತ್ತಿದೆ? ಅದ್ದರಿಂದ ಹಾಲಶ್ಚಿ ಶೇಕಡ 300ರಷ್ಟು ಹೆಚ್ಚಿಸುವ ಏರ್ಪಾಡೂ ಈ ಯೋಜನೆಯಲ್ಲಿ ಅಡಕವಾಗಿದೆಯಲ್ಲದೆ ಜಾನುವಾರುಗಳ ಪಾಲನೆ, ಪೋಷಣೆ ಅವುಗಳಿಗೆ ಬರುವ ಕಾಯಿಲೆಗಳ ನಿವಾರಣೆ ಇವುಗಳ ವಿಚಾರದಲ್ಲಿ ರಚನಾತ್ಮಕ ಸೂಚನೆಗಳನ್ನು ಒಳಗೊಂಡಿದೆ. ಈ ಯೋಜನೆಯಲ್ಲಿ ಜಾನುವಾರುಗಳ ಪುರೋಭಿವೃದ್ಧಿಯ ಸ್ಥೂಲವಾದ ರೂಪರೇಖೆಗಳನ್ನು ಮೂತ್ಸಬಿವರಿಸಲಾಗಿದೆ. ಈ ಸ್ಥೂಲವಾದ ಸೂಚನೆಗಳನ್ನನುಸರಿಸಿ ಆಯಾಯ ಪ್ರಾಂತದವರು ಆಯಾಯ ಪ್ರಾಂತಕ್ಕೆ ಹೊಂದಿಕೆಯಾಗುವ ವಿಧಾಯಕ ಯೋಜನೆಯನ್ನು ಜಾರಿಗೆ ತರಬೇಕಾಗಿದೆ.

ಕೊಡಗಿನ ಜಾನುವಾರುಗಳ ಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಕಾಯಿಲೆಗಳಿಂದ ಉಂಟಾದ ದನಗಳ ಮರಣದಿಂದ ಈ ವರ್ಷ ವ್ಯವಸಾಯಮಾಡುವದೇ ಕಷ್ಟವಾಗಿದೆ. ಕೊಡಗಿನ ವ್ಯವಸಾಯಕ್ಕಾಗಿ ಬೇರೆ ಪ್ರಾಂತವನ್ನು ಹೊಂದಿಕೊಂಡಿರಬೇಕಾದ ಪರಿಸ್ಥಿತಿ ಬಂದಿದೆ. ಈ ನಿಸ್ಸಹಾಯ ಪರಿಸ್ಥಿತಿಯನ್ನು ಹೋಗಲಾಡಿಸಲು ಸರಕಾರವು ಪ್ರಯತ್ನಿಸಬೇಕು. ಕೊಡಗಿನ ಜಾನುವಾರುಗಳ ಪುರೋಭಿವೃದ್ಧಿಗಾಗಿ ಯೋಗ್ಯ ಯೋಜನೆಯನ್ನು ತಯಾರಿಸಬೇಕು. ಸರಕಾರವು ಕೊಡಗು ವೆಟರಿನರಿ ಸಂಘದ ಸಹಾಯ ಪಡೆದು ಇಂಥಾ ಒಂದು ಯೋಜನೆಯನ್ನು ಶೀಘ್ರ ತಯಾರಿಸಬಹುದು. ಈ ಯೋಜನೆಗೆ ತಗಲುವ ಖರ್ಚನ್ನು ಮೇಲ್ಕಂಡ ಅಖಿಲ ಭಾರತ ಯೋಜನೆಗೆ ಸೂಚಿಸಿರುವ 1 ಸಾವಿರ ಕೋಟಿ ರೂಪಾಯಿಯಿಂದ ಇಂಡಿಯಾ ಸರಕಾರದಿಂದ ಪಡೆಯುವ ಪ್ರಯತ್ನ ಮಾಡಿದರೆ ಅದು ಸಫಲವಾಗುವುದರಲ್ಲಿ ಸಂಶಯವಿಲ್ಲ. ಕೊಡಗಿನ ಜಾನುವಾರುಗಳ ಪರಿಸ್ಥಿತಿ ಇಷ್ಟು ದಾರುಣವಾಗಿರುವಾಗಲೂ ಸಹ ಹೇಗೂ 'ದಿನ ಕಳೆಯಲಿ' ಎಂಬ ಭಾವನೆಯಿಂದ ತಟಸ್ಥರಾಗಿದ್ದರೆ ದೇಶದ ಅವನತಿಯು ಕಟ್ಟಿಟ್ಟಂತೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೊಡಗಿನ ಜಾನುವಾರುಗಳ ಅಭಿವೃದ್ಧಿಯ ಬಗ್ಗೆ ಯೋಗ್ಯ ಯೋಜನೆಯೊಂದನ್ನು ತಯಾರಿಸಿ ಇಂಡಿಯಾ ಸರಕಾರದ ಆಭಯ ಹಸ್ತದ ಕೃಪೆಯನ್ನು ಪಡೆದು ದೇಶದ ಕಲ್ಯಾಣವನ್ನು ಸಾಧಿಸಬೇಕಾದುದು ಆದ್ಯ ಕರ್ತವ್ಯ.

ಒಳ್ಳೆಯ ಕೆಲಸ.

ಕೊಡವ ವಿದ್ಯಾಭಿವೃದ್ಧಿ ಫಂಡಿನ ಸಿಂಪಿಂಗು ತಾ. 23-7-44 ರಲ್ಲಿ ಮಡಿಕೇರಿ ಸೆಂಟ್ರಲ್ ಸ್ಕೂಲ್ ಹಾಲ್‌ನಲ್ಲಿ ರಾ. ಬ. ಕೆ. ಟಿ. ಉತ್ತಪ್ಪನವರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ವರ್ಷಕ್ಕೆ ರಾ. ಬ. ಕೆ. ಟಿ. ಉತ್ತಪ್ಪನವರನ್ನು ಪ್ರೆಸಿಡೆಂಟರಾಗಿಯೂ, ಶ್ರೀ ಚೇರಂಡ ಮಂದಣ್ಣನವರನ್ನು ಕಾರ್ಯದರ್ಶಿಯರಾಗಿಯೂ ಮತ್ತು ಶ್ರೀ. ಮೂಡೆಮಾಡ ಚಂಗಪ್ಪನವರನ್ನು ಖಜಾನ್ಜಿಯರಾಗಿಯೂ ಆರಿಸಲಾಯಿತು.

ಕೊಡವ ವಿದ್ಯಾಭಿವೃದ್ಧಿ ಫಂಡಿನ ಜೀವಾವಧಿ ಸದಸ್ಯತ್ವಂತೆಗೆ ರೂ. 500 ನ್ನು ಕೊಟ್ಟು ಶ್ರೀಮತಿ ಕೊರವಂಡ ದೇಚಮ್ಮ ಮುತ್ತಣ್ಣನವರೂ, ಶ್ರೀ. ಅಪ್ಪನೆರವಂಡ ಕಾಳಪ್ಪನವರೂ ಸದಸ್ಯರಾಗಿರುವರು. ಶ್ರೀ. ನಡಿಕೇರಿಯಂಡ ಸೋಮಣ್ಣನವರು ಜೀವಾವಧಿಸದಸ್ಯರಾಗಲು ಪ್ರಾಗ್ದಾನಮಾಡಿರುವರು.

ಗೋಣಿಕೊಪ್ಪಲಿನ ಶ್ರೀ ಗಿಂಗೌಡರ ತಿಮ್ಮಯ್ಯನವರು ಈ ತಾ. 24 ರಲ್ಲಿ ಮೈಸೂರು ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಆವರ ಶವವನ್ನು ಗೋಣಿಕೊಪ್ಪಲಿಗೆತಂದುದಫನಕ್ರಿಯೆ ನಡೆಯಿತು.

ಮಡಿಕೇರಿ ಮಹಿಳಾ ಸಮಾಜದ ಆಶ್ರಯದಲ್ಲಿ ಹಿಂದೀ ತರಗತಿಯು ತಾ. 1-7-44 ರಿಂದ ಇಲ್ಲಿಯ ಓಂಕಾರೇಶ್ವರ ದೇವಸ್ಥಾನ ಹಾಲ್‌ನಲ್ಲಿ ತೆರೆಯಲ್ಪಟ್ಟಿದೆ. ಶನಿವಾರ ಮತ್ತು ಆದಿತ್ಯವಾರಗಳಲ್ಲಿ ಪಾಠ ಹೇಳಲಾಗುತ್ತಿದೆ. ಈಗ ಸುಮಾರು ನೂವತ್ತು ಜನ ಹೆಂಗಸರು ಮತ್ತು ಮಕ್ಕಳು ಹಿಂದೀ ಕಲಿಯತೊಡಗಿದ್ದಾರೆ.

ಸೋಮವಾರಪೇಟೆ ನೋಟಫೈಡ್ ಏರಿಯಾದ ಸದಸ್ಯರಾಗಿ ಶ್ರೀಗಳಾದ ಜಿ. ಎಸ್. ಬಸಪ್ಪ, ಎಚ್. ಎಂ. ಬಸಪ್ಪ, ಜಿ. ಬಸಲಿಂಗಯ್ಯ, ಬಿ. ಟಿ. ಚಿನ್ನಯ್ಯ, ಡಿ. ಎಚ್. ದಾಸಪ್ಪ, ಕೆ. ಮೊಗಪ್ಪ ಮತ್ತು ಎಚ್. ಸಿ. ರಾಜಾರಾಯರನ್ನು ಆರಿಸಲಾಗಿದೆ.

ಕೊಡ್ಲಿಪೇಟೆ ಮತ್ತು ಫ್ರೇಜರ್ ಪೇಟೆ ನೋಟಫೈಡ್ ಏರ್ಯಾಗಳಿಗೆ ಚುನಾವಣೆಯು ತಾ. 31-7-44 ರಲ್ಲಿ ನಡೆಯುವದು.

1938 ನೇ ಕೊಡಗು ಎಗ್ರಿಕಲ್ಚರಲ್ ಪೆಸ್ಟ್ಸ್ ಮತ್ತು ಡಿಸೀಸಸ್ ಆಕ್ಟಿನ ಮೇರೆ ಪರಿಶೋಧನಾ ಅಧಿಕಾರಿಗಳಾಗಿ ಶ್ರೀ. ಅಮ್ಮಂಡ ಗಣಪತಿಯವರನ್ನು ಸೋಮವಾರಪೇಟೆಗೂ, ಶ್ರೀ ಅಳಮಂಡ ಪೊನ್ನಪ್ಪನವರನ್ನು ಸುಂಟಿಕೊಪ್ಪಲಿಗೂ, ಶ್ರೀ. ಮಂಡಿರ ಚಂಗಪ್ಪನವರನ್ನು ಮಡಿಕೇರಿಗೂ ಶ್ರೀ. ಬಿ. ಎಂ. ಬಿದ್ದಯ್ಯನವರನ್ನು ಅಮ್ಮತ್ತಿಗೂ ನೇಮಿಸಲಾಗಿದೆ.

ರಹದಾರಿ ಇಲ್ಲದೆ ಕೊಡಗಿನಿಂದ ಹೊರಗೆ ಕಳುಹಿಸಲು ನಿಶ್ಚೇಧಿಸಿರುವ ಯಾವ ವಸ್ತುಗಳನ್ನಾ, ಯಾವ ಮನುಷ್ಯನೂ ಅಧಿಕಾರಿಗಳಿಂದ ಆ ಬಗ್ಗೆ ರಹದಾರಿ ಪಡೆಯದೆ ಕೊಡಗಿನಿಂದ ವೀರಾಜಪೇಟೆ-ನೂವುಕೂಟ ರಸ್ತೆಯ 29 ನೇ ಮೈಲು ಕಲ್ಲಿನ ಆಜೆ, ಬಿಟ್ಟಂಗಾಲ-ನೆರಂಬಾಡಿ ರಸ್ತೆ ಮತ್ತು ಬಿಟ್ಟಂಗಾಲ-ವೀರಾಜಪೇಟೆ ರಸ್ತೆಗಳು ಬಂದು ಸೇರುವ ಸ್ಥಳದ ಆಜೆ ಸಾಗಿಸಕೂಡದಾಗಿ ನಿರ್ಬಂಧಿಸಿದೆ. ಸಾಯಂಕಾಲ 11 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ಸಾಮಾನು ತುಂಬಿಸಿದ ಯಾವ ಲಾರಿ ಯಾ ಗಾಡಿಯೂಗಲಿ ಕೊಡಗಿನಿಂದ ನೂವುಕೂಟವನ್ನು ದಾಟಿ ಹೋಗಕೂಡದೆಂದು ನಿರ್ಬಂಧಿಸಿದೆ.

ಅಮ್ಮತ್ತಿನಾಡು ಕೊಳತ್ತಡ ಜೈಗೋಡು ಗ್ರಾಮದ ಶ್ರೀ. ಸ್ವೋಮೆಯಂಡ ಲೇಟ್ ಐಯ್ಯಪ್ಪನವರ ಪುತ್ರ ಗಣಪತಿಯವರು ಇಂಡಿಯಾ ಸರಕಾರದವರು ಏರ್ಪಡಿಸಿದ್ದ ವಿಮಾನದಲ್ಲಿ ಬೆಂಗಳೂರಿನಿಂದ ಬೊಂಬಾಯಿಗೆಸೈನಿಕ ಸೇವೆಗಾಗಿ ಹೋಗಿಬಂದಿರುವರು. ಶ್ರೀಯುತರಿಗೆ ಸೈನ್ಯ ಕಲೆಯಲ್ಲಿ ಉಜ್ವಲ ಭವಿಷ್ಯವಿರುವಂತೆ ಕಂಡುಬರುತ್ತಿದೆ.

ಮೈಸೂರು ಪೇಪರ್ ಮಿಲ್ಸಿನ ಪೇಪರ್ ಟೌನ್ ಆಸ್ಪತ್ರೆಯಲ್ಲಿ ಮಿಡ್‌ವೈಫರಾಗಿದ್ದ ಶ್ರೀ. ಎಂ. ಎಂ. ಪೊನ್ನಮ್ಮ (ಶ್ರೀ. ಪೆಮ್ಮಚಂಡ ಜಿ. ಪೂವಯ್ಯನವರ ಪತ್ನಿ) ನವರು ತಾ. 17-7-44 ರಲ್ಲಿ ಶಿವಾಧೀನರಾದರೆಂದು ತಿಳಿಯಬರುತ್ತದೆ.

ಕಸ್ತೂರಿ ಬಾ ಸ್ಮಾರಕ ನಿಧಿ.

ಕೊಡಗು ಸಹಕಾರಮಾರ್ಕೆಟಿಂಗ್ ಫೆಡರೇಶನ್	400
ಕೊಡಗು ಸಹಕಾರ ಸೆಂಟ್ರಲ್ ಬ್ಯಾಂಕು	300
ಜಯಲಕ್ಷ್ಮಿ ರೈಸ್ ಮಿಲ್ (ಅಮ್ಮತ್ತಿ)	100
ಲೇಟ್ ದೇಸಣಿರ ಪೂನಿ ಅಪ್ಪಯ್ಯನವರು	50
ಶ್ರೀ ನೆಲ್ಲಮುಕ್ಕಡ ಎಂ. ಚಿಣ್ಣಪ್ಪ	,, 50
,, ಕೋಣೇರಿರ ಪಿ. ಐಯ್ಯಪ್ಪ	,, 30
ಶ್ರೀಮತಿ ಕೋಣೇರಿರ ದೇಚವ್ವ	,, 60
ಶ್ರೀ ಮೂಚಿಮಂಡ ಎ. ಐಯ್ಯಪ್ಪ	,, 30
ಶ್ರೀಮತಿ ಪುಲಿಯಂಡ ಮುದ್ದವ್ವ	,, 25
ಲೇಟ್ ಮಿಸೆಸ್ ಕುಟ್ಟಂಡ ಟಿ. ಮುತ್ತಣ್ಣ	,, 25
ಮಿಸೆಸ್ ಕುಟ್ಟಂಡ ಎಸ್ ಮುತ್ತಣ್ಣ	,, 10
ಮಿಸೆಸ್ ಮಂಡೇಪಂಡ ಗಂಗವ್ವ ಮೂದಪ್ಪ	,, 10
ಮಿಸೆಸ್ ಮೂಳೇರಿರ ಮೂಚಯ್ಯ	,, 10
ಪೂದ್ರಿಮಾಡ ಮತ್ತು ಪಂದ್ಯಂಡ ಕುಟುಂಬ	,, 7

5 ರೂ. ಕೊಟ್ಟವರು.

ಶ್ರೀಗಳಾದ ಪಳಂಗಂಡ ನಂಜಪ್ಪ, ಕೊಡೇರಿರ ಕುಶಾಲಪ್ಪ, ಮೊಳ್ಳೇರ ಕುಂಞಪ್ಪ, ಕೆ. ವಿ. ವಾಸುದೇವನ್, ಟಿ. ವಿ. ಕೃಷ್ಣಪ್ಪ ಇವರುಗಳು.

3 ರೂ. ಕೊಟ್ಟವರು.

ಶ್ರೀಗಳಾದ ಕೊಕ್ಕಲೆರ ಮೂಚಯ್ಯ, ಕುಕ್ಕನೂರು ಪೂವಯ್ಯ, ಮಿಸೆಸ್ ಉದ್ದಪಂಡ ಸೋಮಯ್ಯ, ಇವರುಗಳು. ಸಿ. ಎಂ. ಗಣಪತಿಯವರು ರೂ. 2. ಬೊಳ್ಳಂಡ ಮುತ್ತಪ್ಪ ಮತ್ತು ಕರ್ತೂರ ಮೂದಪ್ಪನವರುಗಳು ರೂ. 1ರಂತೆ.

ಈ ವರೆಗೆ ರೂ. 5,427 ಸೂಲಾಗಿದೆ.

WANTED.

An Estate writer with the knowledge of Accountancy and type writing on a salary of Rs. 50/- with dearness allowanee of Rs. 15/- per month. An increment of Rs. 5/- per year will be given on the merits of the work turned out. Free accomodation will be given.

For further particulars please apply to:-

P. Kunhi Kannan,
Perumbubetta Estate,
8-3 POLLETBT.

—೦೦—

WANTED

influential and capable Salesman on salary and travelling allowance to push our products in the Estates of Coorg and Mysore. For terms apply in person to:

MANAGING DIRECTOR,
The Metal Industries, Ltd.,
3-3 Shoranur, South Malabar.

ರಣಭೇರಿ.

ಜರ್ಮನಿಯ ಜನರಲ್ಲಿ ನಿರಾಶೆಯು
ನ್ನವಾದ ಚಿಹ್ನೆಗಳು ಕಂಡ ಬರುತ್ತಿ
ರಷ್ಯಾ ರಣಾಂಗಣದಲ್ಲಿ ಅಪಜ
ಯ, ಇಟಲಿಯಲ್ಲಿ ಕೆಸರ್‌ಲಿಂಗನ ಸಂಧಾ
ಫ್ನನ್ನಿನಲ್ಲೂ ನಿರಾಶೆ. ಈ ರೀತಿ
ಎಂಭ ಜರ್ಮನರಲ್ಲಿ ಒಂದು ಬಗೆ
ನಿರಾಶೆ ಹುಟ್ಟಿರಬೇಕು. ಆದ್ದ
ದಲೇ ಹಿಟ್ಲರನು ಮುಸಲೋನಿಯ
ಟಿಗೆ ವರ್ತಮಾನವನ್ನು ಕಳಿಸಿ ಮುಂತಾ
ನಾನಿಗಳೆಲ್ಲರನ್ನು ಕರೆಸಿ ಮುಂತಾ
ಜನೆ ನಡೆಸಿರುವನು. ಹಿಟ್ಲರ್
ಮುಸಲೋನಿಯ ಭೇಟಿಯಲ್ಲೀಗ ಹಿ
ರನನ್ನು ಕೊಲೆಮಾಡುವ ಯತ್ನ ನ
ನುದು! ಹಿಟ್ಲರನು ಜೀಗೂ ಪಾರಾ
ಟ. ಈ ರೀತಿ ಹಿಟ್ಲರನ ಮೇಲೆ
ರ್ಮನರೇ ಕೈಮಾಡಲು ಕಾರಣವೇ
ದು ಯೋಚಿಸಬೇಕು. ಮಿತ್ರರಾ
ಗಳು ಪ್ರಚಾರ್ಯನಡೆಸಿ ಈ ವಿಕೋರಿ
ನ್ನೆಬ್ಬಿಸಿನಿಮೆಂಬು ಕೆಲವರಿನ್ನು
ರಿ. ಇದು ಎಷ್ಟರ ಮಟ್ಟಿಗೆ ನಿಜ
ೀ ಹೇಳಲು ಬರುವುದಿಲ್ಲ. ಜರ್ಮ
ಜನರು ಬೇರೊಬ್ಬರ ಸೂಚನೆಗೆ ಮ
ಳ್ಳಾಗಿ ತನ್ನ ದೇಶವನ್ನು ಗಂಡಾಂ
ದಲ್ಲಿ ನೂಕುವ ಕೀಳು ಮನೋಭ್ಯ
ಯವರಲ್ಲವೆಂಬುದು ಅವರ ಈ ವರೆ
ಯ ಉದಾತ್ತ ಚರಿತ್ರೆಯಿಂದ ತಿಳಿದು
ಬರುತ್ತಿದೆ. ಇಂದು ಜರ್ಮನಿಯಲ್ಲಿ ನಿ
ಕೆಯಾವ್ಪನ್ನವಾಗಿದ್ದರೆ ವಿವಿಧ ರಣ
ತ್ರದಲ್ಲಿ ವಿನಸಹಿ ದೊರೆಯುತ್ತಿರು
ಸೋಲಿನ ಕಾರಣದಿಂದ. ಮಿತ್ರ
ಡಗಳು ಜರ್ಮನಿಯ ಹತ್ತಿರ ಬಂ
ಪಿ. ಮುಂದೆ ಜರ್ಮನ್ ರಾಷ್ಟ್ರದ,
ರ್ಮನರ ಗತಿಯೇನಾಗಬಹುದೆಂದು
ವಳಗೆಗಂಡವರಿರಬಹುದು, ಇವರೇ
ಪಿತೂರಿ ಕಾರಣರಾಗಿ ಬಹುದು.
ಟ್ಲರನ. ತನಗೆ ಅಪಜಯಂಬಿಕೆಯಿದ್ದ
ನಾನಿಗಳನ್ನು ಬದಲಾಯಿಸಿ ಹೊಸ
ನಿಕಾರಿಗಳನ್ನು ನೇಮಿಸಿದ್ದಾನೆ. ಜ
ರ್ಮನಿಯಲ್ಲಿ ತೋರಿಬಂದ ಈ ಐಮ್ಯವ
ಯಿಂದ ಯಾರೂ ಸಂತೋಷಪಡುವ
ರಣವಿಲ್ಲ. ಈ ಐಕ್ಯವಸ್ಥೆಯು ತ
ನೋರಿದ್ದರೂ ಅದು ನಾಝಿಗಳ ವ
ಮುಷ್ಟಿಗೆ ವಿರಿದುದಲ್ಲ. ಅಂತೆ
ೀ ಒಳಸಂಚುಗಾರರನ್ನು ಸಮೂಲ
ನಶಮಾಡಿದ ವರ್ತಮಾನಗಳೂ ಬಂದಿವೆ.
ೀಗೆಗೆ ಜರ್ಮನಿಗೆ ಯುದ್ಧದಲ್ಲಿ
ಹು ನಷ್ಟವಾಗಿದ್ದರೂ ಅವರ ಸೈನ್ಯ
ಕ್ತಿ ಉಡುಗಿಹೋಯಿತೆಂದು ಹೇಳ
ಆಗುವದಿಲ್ಲ. ಲೆ. ಜನರಲ್ ಮೂ
ರ್ನಾರವರ ಅಂದಾಜು ಮೇರೆ ಜ
ರ್ಮನರ 320 ದಳಗಳೂ, ಅ
ರ ಸಾಮಂತರ 80 ದಳಗಳೂ ಇ
ನ್ನೂ ಇವೆಯೆಂಬುದನ್ನು ನೋಡಿದರೆ
ರ್ಮನರು ಅಪಜಯ ಪಡೆದಿದ್ದರೂ
ಣಾಗತರಾಗುವ ಪರಿಸ್ಥಿತಿ ಬಂದಿಲ್ಲ
ಂಬುವದು ತಿಳಿದುಬಾರದಿರದು.

ಫ್ರಾನ್ಸ್ ರಣರಂಗವನ್ನು ಪ್ರತ್ಯಕ್ಷ
ಾಗಿ ನೋಡಿದರೆ ಸೆಂಟ್‌ಲೋವು ಅವೇಂಕನನ ವಶವಾಯಿತ್ತು. ರೋ
ಮೆಲ್ಲನು ಓರ್ನ ಮತ್ತು ಓರನ್ ನದಿ
ಗಳ ಮಧ್ಯೆ ವ್ಯೂಹರಚಿಸಿದ್ದಾನೆ. ಈ
ಭಾಗದಲ್ಲಿ ಅತನು ತನ್ನ ಕೀರ್ತಿಗೆ ತ
ಕ್ಕಂತೆ ಬ್ರಿಟಿಷರನ್ನು ಎದುರಿಸುತ್ತಿ
ದ್ದಾನೆ. ಕೆಯಿನ್ ನಗರವನ್ನು ವಶ
ಪಡಿಸಿಕೊಂಡ ನಿಶ್ಕ್ರರ ಬಳಗಳು ಮುಂ
ದುವರಿಯುವದು ಕಷ್ಟವಾಗಿ ಪರಿಣಮಿ
ಸಿದೆ. ಜರ್ಮನರು ಇಲ್ಲಿ ಬಹು ಚೆ
ನ್ನಾಗಿ ತಳವೂರಿದ್ದಾರೆ. ಅವರನ್ನು
ಕೆತ್ತೊಗೆಯುವದು ಪ್ರಯಾಸವಾಗಿದೆ.
ಮಳೆಗಾಲವು ಹೆವಾಗುಣದ ಕಾರಣ
ನಿಶ್ಕ್ರರಿಗೆ ತೊಂದರೆಯಾಗಿದೆ. ಕೆಯಿ
ನ್ ನಗರದ ದಕ್ಷಿಣದಲ್ಲಿ ಜರ್ಮನರಿ
ಗೆ ಅಲ್ಪ ಸ್ವಲ್ಪ ಜಯಗಳಾಗಿವೆ. ಇ
ಲ್ಲಿಯು ಅಮೇರಿಕನ್ ಸೇನೆಗಳನ್ನು ಕೆ
ಲವು ಕಡೆಗಳಲ್ಲಿ ಹಿಮ್ಮೆಟ್ಟಿಸಿದುವರು.
ರೋಮೆಲ್ಲನ ಪ್ರತಿಭಟನೆ ಭೀಕರವಾಗಿ
ದೆ. ಎಷ್ಟರ ವರೆಗೆ ಅವನು ಹೀಗೆ
ಹೋರಾಡಬಹುದೆಂಬುದನ್ನು ಮುಂದೆ
ನೋಡಬೇಕು. ಹೇಗೂ ಫ್ರಾನ್ಸ್‌ನ ರ
ಣರಂಗದ ದೃಷ್ಟ್ಯ ಜರ್ಮನಿಗೆ ಕಳೆದ
ವಾರವಷ್ಟು ನಿರಾಶವಾಗಿಲ್ಲ.

ಆದರೆ ಅತ್ತ ರಷ್ಯಾದಲ್ಲಿ ಸ್ಥಿತಿ
ಶೋಚನೀಯವಾಗಿದೆ. ಜರ್ಮನರ
ಪೂರ್ವ ಪ್ರಶ್ಯಾದ ಹತ್ತಿರ ರಷ್ಯಾ ದಂ
ಹುಗಳು ಬಂದಿವೆ. ವಿನ್ಸ್ಕ್ಯನ್ನು ವ
ಶಪಡಿಸಿಕೊಂಡ ರಷ್ಯನರು ತಡಯಿಲ್ಲದೆ
ಮುಂದು ಸಾಗಿದ್ದಾರೆ. ಪೋಲೆಂಡಿನ
ಲ್ಲಿಯು ಕಾರ್ಘನ್ ರೇಖೆಯನ್ನು ಧಾ
ಟಿ ಮುಖ್ಯ ನಗರವಾದ ವಾರ್ಸಾದ
ಮೇಲೇರಿ ಬರುತ್ತಿದ್ದಾರೆ. ಲೂಬ್ಲಿ
ನ್ ನಗರವನ್ನು ರಷ್ಯನರು ವಶಪಡಿಸಿ
ಕೊಂಡಿರುವರು. ಈ ಮಧ್ಯೆ ಪೂರ್ವ
ಪ್ರಶ್ಯಾದಲ್ಲಿಯ ಜರ್ಮನ್ ದಂಡುಗಳು
ಹಿಂಗೆಯೆನ್ನಿಮೆಯೆಂಬ ವಾರ್ತೆ
ಯೊಂದು ಬಂದಿದೆ. ಇದು ನಿಜವಾದ
ದರೆ ಜರ್ಮನಿಯು ಮುದಿನಗಳು ಪ್ರಾ
ರಂಭವಾವುವೆಯೆ ಎನ್ನಬಹುದು. ಆದ
ರೂ ಜರ್ಮನ್ ಯೋಧರ ತೋಳುಗ
ಳಲ್ಲಿ ಶಕ್ತಿಯಿದೆ. ಅವರು ರಷ್ಯನರ
ಮುನ್ನಡೆಯನ್ನು ತಡೆದು ನಿಲ್ಲಿಸಬಹು
ದು ತಡೆದು ನಿಲ್ಲಿಸಿದರೂ ಎಂದಾದ
ರೂ ರಷ್ಯನರು ಜರ್ಮನ್ ನಡಿಭೂಮಿಯನ್ನು
ಮುಟ್ಟದಿರರು ಎಂದು ಹೇಳುತ್ತಿದೆ.

ಇಟಲಿಯಲ್ಲೂ ಜರ್ಮನರ ಸ್ಥಿತಿ
ಜೆನ್ನಾಗಿಲ್ಲ. ಬ್ರಿಟಿಷರ ಎಂಟನೆ ದ
ಳವು ಅಡ್ರಿಯಾಟಿಕ್ ಪಟ್ಟಣವನ್ನು ವಶಪಡಿಸಿ
ಕೊಂಡು ಮುಂದೆ ಸಾಗುತ್ತಿದೆ. ಲಿ
ಗ್‌ಹಾರ್ನ್‌ನ್ನು ದಾಟಿ ಅಮೇರಿಕನ್
ದಂಡುಗಳೂ ಮುಂದೆ ಸಾಗತೊಡಗಿವೆ.

ಜರ್ಮನರ ಪರಿಸ್ಥಿತಿ ಹೀಗಿದ್ದರೆ
ಇತ್ತ ಜಪಾನಿನಲ್ಲಿಯೂ ಗಡಿಬಿಡಿ ಪ್ರಾ
ರಂಭವಾಗಿದೆ. ವಿಖ್ಯಾತಗೊಂಡ ಟೋ
ಜೋ ಮಂತ್ರಿಮಂಡಳವು ರಾಜಿನಾಮೆ
ಕೊಟ್ಟು ಬೇರೆ ಮಂತ್ರಿ ಮಂಡಳದ ರ
ಚನೆಯಾಗಿದೆ. ಟೋಜೋರವರ ಅ
ಡಳಿತೆಯಲ್ಲಿ ಯುದ್ಧವು ಯೋಚಿಸಿದ್ದ
ಷ್ಟು ತೀವ್ರವಾಗಿ ಮತ್ತು ಯಶಸ್ವಿಯಾ
ಗಿ ನಡೆಯುತ್ತಿಲ್ಲವೆಂಬು ಈ ಬದಲಾ
ಣೆಯೂ ಸೂಚಿಸುವಂತೆ. ಜನರಲ್ ಕುನ್ಯೆ
ಕಿ ಕೊಯಿಸೋರವರು ಮುಖ್ಯ ಮಂ
ತ್ರಿಯಾಗಿದ್ದಾರೆ. ಯುದ್ಧವನ್ನು ಶೀ
ಘ್ರವಾಗಿ ವಿಜಯದ ಶಿಖರಕ್ಕೆ ಸಾಗಿ
ಸುವದೇ ಈ ಹೊಸ ಮಂತ್ರಿಮಂಡಳದ
ಧ್ಯೇಯವೆಂದು ಸಾರಲ್ಪಟ್ಟಿದೆ. ಶಾಂ
ತಿಸಾಗರದಲ್ಲಿ ಮುಖ್ಯವಾಗಿ ಶ್ರೇಷ್ಠ
ಶಃ ಮುಂದರಿಯುತ್ತಾ ಬಂದು ನೆಲೆ
ನಾದ್ವೀಪಗಳಲ್ಲಗಳಿಂದ ಸಾಗಿ ಸೈಪಾನ್
ದ್ವೀಪವನ್ನು ಹಿಡಿದಿರುವರು. ಇದ
ರಿಂದ ಜಪಾನಿಗೆ ಸ್ವಲ್ಪ ಗಾಬರಿಯಾ
ಗಿದೆ. ಈ ಕಾರಣದಿಂದ ತನ್ನ ಮಂತ್ರಿ
ಮಂಡಳದ ಬದಲಾವಣೆ ಮಾಡಿರುವ
ರು. ಈ ಬದಲಾವಣೆಯಿಂದಾಗಿ ಜಪಾ
ನರಲ್ಲಿಯೂ ಜರ್ಮನಿಯಲ್ಲಿಯಂತೆ ಕ
ಳವಳಬಂದಿದೆ; ಅವರ ಶಕ್ತಿಯಹ್ರಾ
ಸವಾಗಿದೆಯೆಂದು ಕೆಲವರು ಆನ್ನುತ್ತಿ
ದ್ದಾರೆ. ಇದು ಶುದ್ಧ ತಪ್ಪು ಕಲ್ಪನೆ.
ಜಪಾನರಿಗೆ ಅಲ್ಲಲ್ಲಿ ಸ್ವಲ್ಪ ಭಪ್ಪವಾಗಿ
ದ್ದರೂ ಅವರ ವಿಮಾನ, ನೌಕಾ, ನೆಲ
ಸೇನೆಗಳು ಅಖಂಡವಾಗಿವೆ. ಮಿತ್ರ
ರಿಂದ ಅವರು ಹಿಡಿದುಕೊಂಡ ಭೂ
ಭಾಗದ 20 ನೇ ಒಂದು ಭಾಗವನ್ನು
ಕೂಡ ಮಿತ್ರರು ಪುನರಾಕ್ರಮಿಸಿರುವ
ದಿಲ್ಲ. ಚೈನಾದಲ್ಲಿ ಜಪಾನರ ಧಳಿ
ಜೋರಾಗುತ್ತಾ ಬರುತ್ತಿವೆ. ಹೀಗಿ
ರುವಾಗ ಜಪಾನರು ಸಿರಾಶೆಗೊಳ್ಳಲು
ಕಾರಣವಿಲ್ಲ. ಜಪಾನರು ಯುದ್ಧ
ಕುಶಲರು. ದೀರ್ಘಕಾಲ ಕಷ್ಟಕ್ಕೆ ಸಿಕ್ಕಿ
ಕೊಳ್ಳುವವರಲ್ಲ. ಜಯಶ್ರೀಯ ದೃಷ್ಟಿ
ಸ್ವಲ್ಪ ಓರೆಯಾದುದರಿಂದಲೇ ಎಷ್ಟೆತ್ನ
ಅವರು ಯೋಗ್ಯ ವ್ಯವಸ್ಥೆ ಮಾಡಿಕೊ
ಳ್ಳುತ್ತಿದ್ದಾರೆ.

ಬರ್ಮಾಗಡಿಯ ಯುದ್ಧದಲ್ಲಿ ಬ್ರಿ
ಟಿಷ್ ಲಿಶರ್ವವಾದ ವಿಶೇಷಘಟನೆಗಳೇ
ನೂ ಈ ವಾರದಲ್ಲಿ ಸಂಭವಿಸಿರುವದಿಲ್ಲ.

ಸ್ವತಂತ್ರ ಭಾರತದ ಸಿದ್ಧತೆಗಳು.

'ಯುದ್ಧಾನಂತರದ ಪ್ರಥಮದಲ್ಲಿ
ಶಾಂತಿ ವ್ಯವಸ್ಥೆಯಲ್ಲಿ ಭಾರತದ ಸ್ವ
ತಂತ್ರ ರಾಷ್ಟ್ರೀಯ ಸರ್ಕಾರವು ಪ್ರಪಂ
ಚದ ಎಲ್ಲಾ ಜನಾಂಗಗಳ ಶಾಂತಿ ಶ್ರೇ
ಯಸ್ಸುಗಳ ಹಿತಸಾಧನೆಗಾಗಿ ಕಾರ್ಯಶೀ
ಲವಾಗಿ ಸಹಕರಿಸುವುದು. ಈ ಉದ್ದೇಶದಿಂದ
ಭಾರತವು ಬ್ರಿಟಿಷ್ ಕಾಮನ್‌ವೆಲ್ತ್
ನೊಡನೆಯೂ ಅಮೆರಿಕಾ ಸಂಯುಕ್ತ
ಸಂಸ್ಥಾನದೊಡನೆಯೂ ಸಾಧ್ಯವಾದ
ರೀತಿಯಲ್ಲಿ ಯುದ್ಧ ನಡೆಸುತ್ತಿರುವ ಶತ್ರು
ರಾಷ್ಟ್ರಗಳೊಡನೆಯೂ ಸಲಹೆ ಸಹಕಾರ
ಎಂಬುದಾಗಿ ಮಹಾತ್ಮ ಗಾಂಧಿಯವ
ರು 'ಕ್ಯಾವಲ್ ಕೇಡ್' ಎಂಬ ಬ್ರಿಟಿಷ್
ನ್ಯೂಸ್ ಕ್ರಾನಿಕಲ್ ಪತ್ರಿಕೆಯವರು
ಕೇಳಿದ ಪ್ರಶ್ನೆಗೆ ಉತ್ತರವನ್ನು ಕಳು
ಹಿಸಿಕೊಟ್ಟಿದ್ದಾರೆ.

ಈ ಪತ್ರಿಕೆಯು ಕಳುಹಿಸಿದ ಪ್ರ
ಶ್ನೆಗಳನ್ನೂ ಆ ಪ್ರಶ್ನೆಗಳಿಗೆ ಕೊಟ್ಟ ಉ
ತ್ತರಗಳನ್ನೂ ಕುರಿತು ಗಾಂಧಿಜಿಯ
ವರು ಈ ಸಾಯಂಕಾಲ ಪತ್ರಿಕೋದ್ಯ
ಮಿಗಳೊಡನೆ ಮಾತುಕತೆ ನಡೆಸಿದರು.

'ನಾನು ಯಾವಾಗಲೂ ಯುದ್ಧ
ವಿರೋಧಿ ಮತ್ತು ಶಾಂತಿಪ್ರಿಯನು.
ಆಗಸ್ಟ್ ನಿರ್ಣಯಕ್ಕೆ ನಾನು ಒಪ್ಪಿಗೆ
ಕೊಟ್ಟುದೂ ಬ್ರಿಟಿಷ್ ಸಾಮ್ರಾಜ್ಯಕ್ಕೆ
ಈಗ ಎಲ್ಲಿಗೆಯನ್ನು ಮಾಡುವ ಸಲು
ರಾಯವಾಗಿ ಅಲ್ಲ. ಕೇ
ಬ್ರಗಳಲ್ಲಿ ಪ್ರಸ್ತಾಪಿಸಿ
ಲ್ಲಿಯೂ ಪ್ರಸ್ತಾಪಿಸಿ
ಲ್ಲ. ನಾನು ಇಂ
ದ್ಧ ಪಡಿಸುವುದಿಲ್ಲವೆಂದು, ಶತ್ರು
ದ ಶಾಂತಿ ವ್ಯವಸ್ಥೆಯ ಒಪ್ಪಂದವು
ಹೇ ವಳಸುಕ್ಕಿನಲ್ಲಿ
ಜನಾಂಗಗಳು ಯುದ್ಧ
ನ್ನು ಜಿಟ್ಟು ಶಾಂತಿ
ದ ಸುಖವಾಗಿರಬೇಕೆಂಬುದೇ ನನ್ನ
ನಸು. ಮಿತ್ರರಾಷ್ಟ್ರಗಳು ನಿಷ್ಪಾಪಿ
ಯೂ ಪ್ರಪಂಚದ ಶ್ರೇಷ್ಠಶಕ್ತಿಯು
ದ್ದ ಮಾಡುತ್ತಿದ್ದರೆ, ಅವರು ನನ್ನ ಸಲ
ಹೆಗಳನ್ನು ಒಪ್ಪಬೇಕು. ಜಾಗತಿಕ
ಸ್ವಾತಂತ್ರ್ಯಕ್ಕಿಂತ ಸಮಸ್ಯೆಯು ತೀರ್ಮಾನ
ವಾದರೆ ಬ್ರಿಟನ್ನಿಗೆ ಪೂರ್ಣ ಬೆಂಬಲ
ವು ದೊರೆತು ಶತ್ರು ಏನಾಂಗಗಳು
ಸೋಲುವವು. ಪ್ರಪಂಚದ ನೆಮ್ಮದಿ
ಜನಾಂಗಗಳಿಗೆಲ್ಲ ಅಶ ಕಿರಣವು ಮೂಡು
ವುದು. ನಾನು ಸ್ವಂತ ಲಾಭ ದೃಷ್ಟಿಯಿಂ
ದ ಚಳುವಳಿ ಹೊರಾಟ ನಡೆಸುತ್ತಿಲ್ಲ
ವೆಂದು ನಿಮಗೆ ಖಚಿತವಾಗಿರಬೇಕು
ದು ಗಾಂಧಿಜಿಯವರು ನುಡಿದರು.

ಇದಲ್ಲದೆ ಆ ಪತ್ರಿಕೆಯು ಕೇಳಿದ
ಇತರ ಮೂರು ಪ್ರಶ್ನೆಗಳು ಮತ್ತು ಅ
ವುಗಳಿಗೆ ಗಾಂಧೀಜಿಯವರು ಕಳುಹಿಸಿದ
ಉತ್ತರಗಳು ಈ ರೀತಿಯಿವೆ:—

1) ಪ್ರ—ಜಪಾನಿಗೆ ಏರ್ಪಡ್ಡವಾಗಿ
ಸ್ವತಂತ್ರ ಇಂಡಿಯಾ ಸರ್ಕಾರವು ಯು
ದ್ಧ ಮಾಡಬಹುದೇ?

ಉ—ಖಂಡಿತ, ಜಪಾನಿಗೆ ವಿರುದ್ಧ
ವಾಗಿ ಯುದ್ಧ ಮಾಡುವುದು.

2) ಪ್ರ—ಪಾಕಿಸ್ತಾನವನ್ನು ಒಪ್ಪಿ
ರುತ್ತೀರಾ?

ಉ—ರಾಷ್ಟ್ರೀಯ ಸಂವಿಧಾನ
ಸೊಕ್ರವು ಕೋಮುವಾರು ಸಮಸ್ಯೆಯ
ಪರಿಹಾರಕ್ಕೆ ಮಾರ್ಗವಾಗಿದೆ. ಪಾಕಿ
ಸ್ತಾನ ಎಂಬ ಪ್ರಶ್ನೆಯು ಉದ್ಭವಿಸಲ್ಲ.

3) ಪ್ರ—ಇಂಡಿಯಾದಲ್ಲಿರುವ ಬ್ರಿ
ಟಿಷ್ ಅಮೆರಿಕಾಗಳ ಬಂಡವಾಳ ವಿ
ಷಯವಾರಿ ಪ್ರಶ್ನೆ ವಿಚಾರವೇನು?

ಉ—ಗೌರವಯುತವಾದ ಒಪ್ಪಂ
ದ ಅಥವಾ ಹಂಚಾಯಿತಿ ಮೂಲಕ
ಇಂಡಿಯದ ರಾಷ್ಟ್ರೀಯ ಹಿತಕ್ಕೆ ವಿರು
ದ್ಧವಾಗದಂತೆ ಈ ಸಮಸ್ಯೆಯನ್ನು ಪ
ರಿಹರಿಸಲಾಗುವುದು.

ಜಪಾನ್ 'ಗೂಢಚಾರರು'

ಜಪಾನ್ ಸಬ್‌ಮೆರಿನುಗಳು ಕೆಲವು ಗೂಢಚಾರರನ್ನು ಹಿಂದೂದೇಶದ ಕೆಲವು ತೀರಪ್ರದೇಶಗಳ ತಂದಿಳಿಸಿದ ನಾರ್ತೆಯನ್ನು ಜನರು ಕೇಳಿರಬಹುದು. ಕೆಲವು ತಿಂಗಳ ಹಿಂದೆ, ಜಪಾನರು, ಮಲ ನದ ಆಡೆ ವಾಸವಾಗಿದ್ದ ಕೆಲಮಂದಿ ಹಿಂದೀ ಪ್ರಜೆಗಳನ್ನು, ಹಿಂದೂದೇಶದಲ್ಲಿ ರಹಸ್ಯವಾಗಿ ಪ್ರಜಾ ಡುವ ಸಲುವಾಗಿ ಕಳಿಸಿದರು. ಅವರು ಒಂದೆಡೆ ಇಳಿಯಲು, ಪೊಲೀಸರಿಗೆ ವದಂತಿ ದೊರೆತು, ರನ್ನೆಲ್ಲ ದಸ್ತಗಿರಿ ಮಾಡಿದರು. ಆ ಕೂಟದ ನೈಕ ನಾಲ್ವರು ಆಪದ್ಭಾಂಧವರೆಂಬ ರುಜುವಾಗಿ, ಆ ಲ್ವರಿಗೂ ಮರಣದಂಡನೆ ವಿಧಿಸಿದರು. ಈಗ ಮತ್ತೊಂದು ಕಂತೆ ಬಂದಿದೆ. ಈ ಎರಡನೆಯ ಕೂ ರಲ್ಲಿದ್ದವರು ಹನ್ನೆರಡು ಮಂದಿ ಸೈನಿಕರು; ಮಲಯದಲ್ಲಿ ಜಪಾನರ ಸೆರೆಯಾಳಾದವರು. ಈ ಹನ್ನೆ ಮಂದಿ ಬಹಳ ಚಾಣರೂ ಚುರುಕಾದವರೂ ಎಂದು ಗ್ರಹಿಸಿ ಜಪಾನರು ಅವರನ್ನಾರಿಸಿ, ಅವರ ಲೆ ಪೂರ್ಣ ಭರವಸೆಯನ್ನಿಟ್ಟು ತರಬೇತಿ ಕೊಟ್ಟು, ಹಿಂದೂದೇಶದಲ್ಲಿ ಗೂಢಾಚಾರರ ಕೆಲಸ ಮಾಡ ಕಳಿಸಿದರು. ಆವರ ಕಥೆಯನ್ನು ಕೇಳಿ.

ಜಪಾನರು ಆರಿಸಿದ ಆ ಹನ್ನೆರ ಮಂದಿಗೂ, ಒಂದು ವರ್ಷದ ತನ , ಪ್ರಚಾರ ಕಾರ್ಯ–ವಿನಾಶಕಾರ್ಯ ವೈರ್‌ಲೆಸ್ ಮೂಲಕ ವಾರ್ತೆಗಳನ್ನು ಕಳುಹಿಸುವುದು–ಇದೆಲ್ಲವನ್ನೂ ಕಲಿಸಿ ಕೊಟ್ಟು ಒಂದು ಸಬ್‌ಮೆರಿನಿನಲ್ಲಿ ಕು ಳ್ಳರಿಸಿ ಹಿಂದೂದೇಶಕ್ಕೆ ಕಳುಹಿಸಿದರು. ಸಬ್‌ಮೆರಿನು, ಇದೇ ಫೆಬ್ರವರಿ ಕೊನೆ ಯಲ್ಲಿ ಒಂದು ದಿನ, ಪಿನಾಂಗ್ (ಮಲ ಯ ಬಂದರದಿಂದ ಹೊರಟಿತು. ಮೂ ರ್ತಿ ತಾರೀಕು 17ಕ್ಕೆ ಬಲುಚಿಸ್ತಾನದ ಕರಾವಳಿಯೂಡೆ ತಲಪಿತು. ದಾರಿ ಯಲ್ಲಿ ಸಬ್‌ಮೆರಿನು ಕೊಂಚ ಸಾಹಸ ಕ್ಕೂ ಯತ್ನಿಸಿತು. ಮಿತ್ರರಾಷ್ಟ್ರಗಳ ಹಡಗುಗಳು ಕಂಡಲ್ಲಿ ಆಭಿಯೋಗಕ್ಕೆ ಯತ್ನಿಸಿತು. ಮಿತ್ರರ ಹಡಗುಗಳು ಈ ಸಬ್‌ಮೆರಿನುಗಳನ್ನು ಬೆನ್ನಟ್ಟಿದು ವು. ಒಮ್ಮೆ ಮಿತ್ರ ರಾಷ್ಟ್ರದ ಒಂದು ವಿಮಾನವು ಈ ಸಬ್ ಮೆರಿನಿನ ಮೇಲೆ ಬಾಂಬು ಬಿಸಾಡಲೆತ್ನಿಸಿತು. ಸಬ್ ಮೆರಿನ್ ಹೇಗೋ ಪಾರಾಗಿ ಬಲುಚಿ ಸ್ಥಾನದ ಕರಾವಳಿಯನ್ನು ಮಾರ್ಚ್ ತಾ ರೀಕು 17ರಲ್ಲಿ ತಲಪಿತು. ತೀರ ಪ್ರ ದೇಶವು ನಿರ್ಜನವಾಗಿತ್ತು. ಸಬ್‌ಮೆ ರಿನ್ ತೀರದಿಂದ ಕೊಂಚ ದೂರ ನಿಂ ತು ಚಿಕ್ಕ ಎರಡು ದೋಣಿಗಳಲ್ಲಿ, ಈ ಗೂಢ ಜನರನ್ನು ಇಳಿಸಿ, ಅದರಲ್ಲಿ ಅ ವಶ್ಯಕ ಸಾಮಗ್ರಿಗಳನ್ನೂ ತುಂಬಿಕೊ ಟ್ಟು ಕಳಿಸಿತು. ವಾಯುಗುಣ ಸರಿ ಇ ಲ್ಲದ್ದರಿಂದ ಕರಾವಳಿಯಲ್ಲಿ ಇಳಿಯಲು ಆಗಲಿಲ್ಲ.

ಪ್ರಥಮ ಯತ್ನದಲ್ಲಿ ಗೂಢಚಾರ ರನ್ನು ಇಳಿಸಲಾಗದೆ, ಸಬ್‌ಮೆರಿನು ಆ ರಾತ್ರಿಯನ್ನು ಕಳೆಯಿತು. ಮರುದಿನ ಕೆಪ್ಟನನು ಬಲುಚಿಸ್ತಾನದ ಮುಕ್ತೊಂ ದು ತೀರಕ್ಕೆ ಹೋಗಿ, ತೀರದಿಂದ ನಾ ಲ್ಕು ಮೈಲು ದೂರವಿದ್ದಾಗ ಹೀಗಂದ ನು–'ಈಗ, ಹೇಗಾದರೂ ನೀವು ತೀರ ದಲ್ಲಿಳಿಯಬೇಕು. ನಾನೇ ತೀರದ ಬ ಳಿಗೆ ಸಾರಲಾರೆ. ಏಕೆಂದರೆ ತೀರ ಪ್ರ ದೇಶದ ಕಾವಲಿನ ಕಣ್ಣಿಗೆ ಬೀಳುವ ಸಂಭವವಿದೆ.']ಹೀಗನ್ನುತ್ತಾ ಅವರೊ ಡನೆ ಉಳಿದಿರುವ (ಮುಡಚಲು ಬರುವ) ಒಂದು ದೋಣಿಯನ್ನು ಹೊರತೆಗೆದ ನು. ಆದರೆ, ಆದೂ ಒಳ್ಳೇ ಸ್ಥಿತಿಯ ಲ್ಲಿರಲಿಲ್ಲ. ಕೆಪ್ಟನನೆಂದನು–'ನಾನು, ವಿನುಗಾರರ ಒಂದು ದೋಣಿಯನ್ನು ಹಿಡಿಯುತ್ತೇನೆ. ವಿನುಗಾರರನ್ನು ಕೊಂದು, ಆ ದೋಣಿಯಲ್ಲಿ ನೀವು ತೀ ರಕ್ಕೆ ಹೋಗಬಹುದು.' ಗೂಢಚಾರ ರು ಈ ಕಾರ್ಯಕ್ಕೆ ಒಪ್ಪಲಿಲ್ಲ. ಕುಥಾ ನಿದೆಯಾದ ಕಾರಣ, ತೀರದಲ್ಲಿಳಿವ ಸ ಮಯವನ್ನು ಮುಂದರಿಸೋಣವೆಂದು ಹೇಗೂ ಕೆಪ್ಟನನ್ನು ಸಮಾಧಾನಗೊಳಿ ಸಿದರು.

ಎರಡನೇ ಯತ್ನವು ವಿಫಲವಾಗ ಲು ಹವೆಯು ಶಾಂತವಾಗುವ ತನಕ ಕಾಯಬೇಕಾಯಿತು. ಒಂದು ವಾರದ ತನಕ ದಂಡೆಗೆ ಹೋಗಲಾಗಲಿಲ್ಲ. ಆ ಏಳು ದಿನವೂ ಸಬ್‌ಮೆರಿನು ಕರಾವಳಿ ಯಿಂದ ಕೆಲವು ಮೈಲು ದೂರ ಅತ್ತಿತ್ತ ಸಂಚರಿಸುತ್ತಲೇ ಇತ್ತು. ಹಗಲಲ್ಲಿ ಮಿತ್ರ ರಾಷ್ಟ್ರದ ಹಡಗುಗಳ ಕಣ್ಣಿಗೆ ಬೀಳದ್ದಂತೆ ಮುಳುಗಿಯೇ ಇರುತಿತ್ತು. ಈ ಒಂದು ವಾರದಲ್ಲಿ ಅವರ ಎರಡು ದೋಣಿಗಳು ಹೇಗೂ ದುರುಸ್ತಿಯಾದವು. ಮಾರ್ಚ್ ತಾ. 24ರಲ್ಲಿ ಮೂರನೇ ಬಾರಿ ತೀರದಲ್ಲಿ ಇಳಿವ ಯತ್ನ ಮಾಡಿದರು. ಸುಮಾರು ನಾಲ್ಕು ಮೈಲು ತ ನಕ ಜಲ್ಲಿ ಹಾಕುತ್ತ, ನಿರ್ಜನವಾದ ದ್ದೊಂದು ಕಡೆಯಲ್ಲಿ ಮುಂಜಾನೆಯ ನಸುಬೆಳಕಿನಲ್ಲಿ ಅವರು (12 ಮಂದಿ) ಬಂದಿಳಿದರು. ಅವರೆಲ್ಲ ತಮ್ಮ ನಾಡಿ ಗೇ ಬಂದಿದ್ದರೆ. ಎಂಥಾ ಆನಂದ. ಅವರಿಗೆ ಈಗ ದೂರ ಸಂದೇಹವೂ, ಆಂಜಿಕೆಯೂ ಇಲ್ಲ. ತಾವಿಳಿದ ತೀರ ದಿಂದ ಸಮೀಪದ ಹಳ್ಳಿಯೆಂದರೆ, ಕ ಲಾತ್ ಸಂಸ್ಥಾನದ ಪಾಸ್ನಿ ಗ್ರಾಮ. ನೇರಾಗಿ ಹೋಗಿ ಅಲ್ಲಿಯ ಜಮೀನ್ದಾ ರನೊಡನೆ ತಾವು ಹೇಗೆ ಬಂದೆವು, ಯಾ ವ ಕಾರ್ಯಕ್ಕಾಗಿ ಕಳುಹಿಸಲ್ಪಟ್ಟೆವು ಎಂ ಬುದನ್ನೆಲ್ಲಾ ವಿವರಿಸಿದರು. ಜಮೀ ನ್ದಾರನು ಅವರನ್ನು ಕೇಳಿಕೊಂಡು, ಅ ಹಾರವಿತ್ತು ಉಪಚರಿಸಿ, ಅವರು ಬಂ ದಿರುವ ವಿಚಾರವನ್ನು ಕರಾಚಿಗೆ ತಿಳಿಸಿ ದನು. ಆನರನ್ನೆಲ್ಲ ಮಿಲಿಟರಿ ಠಾಣ್ಯ ಕ್ಕೊಯ್ಯಲು ಕೂಡಲೇ ಏರ್ಪಾಡಾ ಯಿತು.

ಹನ್ನೆರಡರ ಆ ಕೂಟವು ದಿಲ್ಲಿಗೆ ಬಂತು. ಅಲ್ಲಿ ಮಿಲಿಟರಿ ಅಧಿಕಾರಿಗ ಳೊಡನೆ ತಮ್ಮ ಕಥೆಯನ್ನು ಪೂರ್ಣ ವಿವರಿಸಿ, ಜಪಾನರು ತಮಗೆ ಕೊಟ್ಟಹ ಣವನ್ನೆಲ್ಲ ಒಪ್ಪಿಸಿದರು. ಗೂಢಚಾರ ರಾಗಿ ಕೆಲಸ ಮಾಡುವಾಗ ಕ್ಷೇಮನಿಧಿ ಯೆಂಬಂತೆ ಜಪಾನರು ಕೆಲವು ವಜ್ರಗ ಳನ್ನೂ ಕೊಟ್ಟಿದ್ದರು. ಆ ವಜ್ರಗಳನ್ನೂ ಅವರು ಅಧಿಕಾರಿಗಳಿಗೆ ಒಪ್ಪಿಸಿದರು. ಆ ದಿನದಿಂದ ಇವರೆಲ್ಲ ಅಧಿಕಾರಿಗಳ ಸಂಪರ್ಕವಿಟ್ಟುಕೊಂಡೇ ಇದ್ದಾರೆ. ಅ ವರು ತಂದ ಸುದ್ದಿಗಳು ಮಿಲಿಟರಿ ಅಧಿ ಕಾರಿಗಳಿಗೆ ಮಹತ್ವದ್ದಾಗಿವೆ. ಅವ ರೆಲ್ಲರೂ, ಜಪಾನರು ಕಲಿಸಿಕೊಟ್ಟಂತೆ, ತಾವು ವರ್ತಿಸುವುದಿಲ್ಲವೆಂದು ಮನಸ್ಸಿ ನಲ್ಲೇ ಸಂಕಲ್ಪಿಸಿದ್ದರ.

ಇವರೆಲ್ಲರೂ ಅನೇಕ ಮಂದಿ, ಇ ದೇ ರೀತಿ ಆಲೋಚಿಸಿಯೇ ಹೊರಟಿವ ರು. ಅವರು, ತಮ್ಮ ನಾಡಿಗೆ ತಲಪಿದಂ ದುಕ್ಕೆ ಸಂತೋಷ ಪ್ರಕಟಿಸಿರುವರು. ತಾವು ಮಲಯದಲ್ಲಿ ಕಂಡು ಕೇಳಿದ ಮಹತ್ವದ ವಿಷಯಗಳನ್ನು ಹೊರಗೆಡ ಹಿರುವರು. ಮಲಯದಲ್ಲಿ ಜಪಾನರ ಆಳ್ವಿಕೆಯಾವ ರೀತಿಯದೆಂದೂ ವಿವ ರಿಸಿರುವರು.

'ಪ್ರಭಾತ.'

ಶೀರರಾಜೇಂದ್ರಪೇಟೆಗೆ
'ಕೊಡಗು' ಏಜೆಂಟರು,
ಕೆ. ಯಂ. ಸುಬ್ರಾಯನವರು.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

33) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.

ಒಟ್ಟು ಆದಾಯ	೯೭,೩೭,೦೦೦ ರೂ.	ಮೊದಲೆ
ಚಾಲ್ತಿಯಿರುವ ವಿಮೆ	೧೬,೪೪,೮೮,೦೦೦ ,,	,,
ಆಸ್ತಿ	೬,೩೦,೪೬,೦೦೦ ,,	,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಷೇಮುಗಳು	೮,೩೪,೦೦,೦೦೦ ,,	,,

ಅಂಗ ಕಛೇರಿ: ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.

ಏಜೆನ್ಸಿ ಅರ್ಜಿಗಳನ್ನು ಸ್ವಾಗತಿಸಿದೆ.

ಪ್ರಧಾನ ಕಛೇರಿ: ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರೊಪಿಕಲ್"
ಕಂಪೆನಿಯಲ್ಲಿ ವಿಮೆ ಮಾಡುವದೇ

ಯೋಗ್ಯವೆಂದು ನಿಮ್ಮ **1944** ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಜೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ರಿಕೆಗೆ ಬರೆಯಿರಿ:–

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ, ಬ್ರಾಂಚ್ ಮೇನೇಜರ್, ಮಂಗಳೂರು.

28)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ)

ವಸೂಲಾದ ಶೇರ್ ಮೊಬಲಗು 95,060, ಜಮಾಬಂದ ಠೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನೋಟಿಸು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇ ಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0-8-0.

ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.